(೨೦) ಕುಮಟಾ ತಾಲ್ಲೂಕಿನ ಫಿಷರಿ ಶಾಲೆಯ ಕಟ್ಟಡವನ್ನು ದುರಸ್ತಿಗೊಳಿಸುವುದಂ

ಶ್ರೀ ಆರ್.ಎಸ್. ನಾಯ್ಕ್ (ಭಟ್ಕಳ).—ಮಾನ್ಯ ಅಧ್ಯಕ್ಷರೇ, ಕುಮಟಾ ತಾಲ್ಲೂಕಿನ ಬಂದರು ಭಾಗದಲ್ಲಿರುವ ಫಿಷರೀ ಶಾಲಾ ಕಟ್ಟಡದ ದುಸ್ಥಿತಿಯನ್ನು ಪುಂಗಳೂರು ಪತ್ರಿಕೆಯು ಆಗಸ್ಟ್ ೨೦ರ ಸಂಚಿಕೆಯಲ್ಲಿ ವಿವರಿಸಿದ್ದನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಈ ಕಟ್ಟಡವನ್ನು ನಾನೇ ಸ್ವತಃ ನೋಡಿದ್ದು ಅದು ಅತ್ಯಂತ ಹೀನಾವಸ್ಥೆಯಲ್ಲಿದೆ. ಹಿಂದುಳಿದ ಮೀನುಗಾರ ಸಮಾಜದ ಹಾಗೂ ಅಲ್ಪ ಸಂಖ್ಯಾತರ ಮಕ್ಕಳುಗಳು ಮಾತ್ರ ಇರುವ ಬಾಯಿಬಲ ಇಲ್ಲದಿರುವ ಶಾಲೆ ಇದಾಗಿದೆ. ರಿಪೇರಿಗೆ ಬಂದ ಹಣವನ್ನೆಲ್ಲಾ ಅಧಿಕಾರಿಗಳು ಬಾಯಿಬಲ ಬರೆಯುವ ಬಲ ಉಳ್ಳವರ ಶಾಲೆಗಳಿಗೆ ಕೊಟ್ಟು ಇಂತಹ ಶಾಲೆಯನ್ನು ಹಾಳುಗೆಡಪಲು ಮೂಲಕಾರಣವಾಗಿದ್ದಾರೆ. ೨೦ ವರ್ಷಗಳಿಂದ ಇದೇ ತಾಲ್ಲೂಕಿನಲ್ಲಿ ಬೇಡುಬಿಟ್ಟು ಸರ್ಕಾರಿ ನೌಕರಿ ಹಾಗೂ ರಾಜಕೀಯ ಎರಡನ್ನೂ ಮಾಡುತ್ತಿರುವ ಕುಮಟಾ ತಾಲ್ಲೂಕಿನ ವಿದ್ಯಾಧಿಕಾರಿಗಳು ಈ ಶಾಲೆಯನ್ನು ಎರಡು ಸಲ ತಪಾಸಣೆ ಮಾಡಿಸಿದ್ದರು. ಅವರು ಶಾಲೆಯ ಕಟ್ಟಡ ದುಸ್ಥಿತಿಯಲ್ಲಿರುವುದನ್ನು ಎಂದಾದರೂ ಸರ್ಕಾರಕ್ಕೆ ಬರೆದಿದ್ದಾರೆಯೇ? ಕುಮಟಾ ತಾಲ್ಲೂಕಿನಲ್ಲಿ ಇಂತಹ ಕೆಟ್ಟ ಪರಿಸ್ಥಿತಿಯಲ್ಲಿರುವ ಶಾಲೆಗಳೆಷ್ಟು? ಹೀಗಾಗಲು ಕಾರಣವೇನು ಎನ್ನುವುದರ ಬಗ್ಗೆ ಸದನದಲ್ಲಿ ವಿವರಿಸಬೇಕು.

ಹಿಂದುಳಿದ ಮಕ್ಕಳು ಕಲಿಯುವ ಶಾಲೆಗಳ ಬಗ್ಗೆ ಕಾಳಜಿ ಮಹಿಸದೆ ಒಂದೇ ಊರಿನಲ್ಲಿ ಬೀಡು ಬಿಟ್ಟಿರುವ ಅಧಿಕಾರಿಗಳ ಬಗ್ಗೆ ಏನು ಕ್ರಮ ತೆಗೆದುಕೊಳ್ಳುವಿರಿ? ಹಾಗೂ ಶಾಲಾ ಕಟ್ಟಡದ ದುರಸ್ತಿಯ ಬಗ್ಗೆ ಈ ಸದನದಲ್ಲಿ ಹಣದ ಮಂಜೂರಾತಿಯ ಆಜ್ಞೆ ನೀಡಿ ಸರ್ಕಾರಕ್ಕೆ ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೆಚ್ಚಿನ ಕಾಳಜಿ ಮಹಿಸಿ ಸೂಕ್ತ ರಿಪೇರಿ ಮಾಡಿಸಲು ನಾನು ಸರ್ಕಾರದ ಗಮನ ಸೆಳೆಯುತ್ತೇನೆ. ಶಾಲಾ ಕಟ್ಟಡದ ಕುಸ್ತಿತಿಯನ್ನು ವಿವರಿಸುವ ಪತ್ರಿಕೆಯ ಪುಟವನ್ನು ಇದಕ್ಕೆ ಅಂಟಿಸಲಾಗಿದೆ.

(ಮಾನ್ಯ ಸದಸ್ಯರು ಶಾಲಾ ಕಟ್ಟಡದ ಫೋಟೋವನ್ನು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಿಗೆ ಕಳುಹಿಸಿಕೊಟ್ಟರು)

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ದಿವಸವೇ ಜಿಲ್ಲಾ ವಿದ್ಯಾಧಿಕಾರಿಗಳಿಗೆ ಆದೇಶ ಕೊಡುತ್ತೇನೆ. ತಕ್ಷಣ ಹೋಗಿ ನೋಡಿ. ದುರಸ್ತಿಗಾಗಿ ಏನು ಹಣವನ್ನು ಕೊಟ್ಟಿದ್ದೇವೆ ಅದರಲ್ಲಿ ದುರಸ್ತಿ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ.

(೨೧) ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ತಾಂತ್ರಿಕ ಕಾಲೇಜಿನ ವಿದ್ಯಾರ್ಥಿಗಳಿಂದ ಮುಷ್ಕರ

೨-೦೦ ಪಿ. ಎಂ.

ಶ್ರೀ ಪಂಪಾಪತಿ.—ಸನ್ಮಾನ್ಯ ಅಧ್ಯಕ್ಷರೇ, ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ತಾಂತ್ರಿಕ ಕಾಲೇಜಿನ ಸುಮಾರು ಒಂದು ಸಾವಿರ ವಿದ್ಯಾರ್ಥಿಗಳು ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ, ಮಂಡ್ಯ, ಮೈಸೂರು ಹೀಗೆ ನಾನಾ ಕಡೆಗಳಿಂದ ಬೆಂಗಳೂರಿಗೆ ಬಂದು ಪ್ರತಿಭಟನೆ ಸಲ್ಲಿಸುತ್ತಿದ್ದಾರೆ. ಸುಮಾರು ಒಂದೂವರೆ ತಿಂಗಳಿಂದ ಅವರು ಮುಷ್ಕರ ನಡೆಸುತ್ತಿದ್ದಾರೆ. ಅವರ ಬೇಡಿಕೆಯನ್ನು ಕೂಡ ನಾನು ಲಗತ್ತಿಸಿದ್ದೇನೆ. ಮತ್ತು ಮಾನ್ಯ ಮಂತ್ರಿಯವರಿಗೂ ಕೂಡ ಅದನ್ನು ಕೊಟ್ಟಿದ್ದೇನೆ. ಆದಷ್ಟು ಬೇಗ ಈ ವಿದ್ಯಾರ್ಥಿಗಳನ್ನು ಕರೆಯಿಸಿ ಅವರ ಬೇಡಿಕೆಗಳನ್ನು ಪರಿಶೀಲಿಸಿ ಅವರಿಗೆ ಸಮಂಜಸವಾದ ಒಂದು ಅನುಕೂಲವನ್ನು ಮಾಡಿಕೊಡುವುದಕ್ಕೆ ಮಾನ್ಯ ವಿದ್ಯಾಮಂತ್ರಿಯವರನ್ನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಈ ವಿದ್ಯಾರ್ಥಿಗಳು ಸತ್ಯಾಗ್ರಹ ಮಾಡುತ್ತಿರುವುದು ನನಗೆ ಗೊತ್ತಿರುವ ವಿಷಯ. ಈ ವಿದ್ಯಾರ್ಥಿಗಳು ನನ್ನ ಹತ್ತಿರ ಸಹ ಬಂದಿದ್ದರು. ಕ್ಯಾರೀಡ್ ಓವರ್ ಸಿಸ್ಟಮ್‌ನಲ್ಲಿ ಹೆಚ್ಚಿನ ಬೆನಿಫಿಟ್ ಕೊಡಬೇಕೆಂದು ಕೇಳಿದ್ದಾರೆ. ಆಗ ನಾನು ಹೇಳಿದೆ ಇದು ಸರ್ಕಾರ ಮಾಡುವಂಥ ಕೆಲಸ ಅಲ್ಲ ಎಂದು. ಇದು ಅಕ್ಯಾಡೆಮಿಕ್ ಮ್ಯಾಟರ್. ವಿಶ್ವವಿದ್ಯಾನಿಲಯದವರು ಮಾಡಬೇಕು. ನಾನು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಹತ್ತಿರ ಈ ಬಗ್ಗೆ ಮಾತನಾಡಿದೆ. ಅವರು ಕಮಿಟಿ ಆಫ್ ಅಕಾಡೆಮಿಕ್ ಕೋರ್ಸ್‌ನ